# ಸ್ವರ್ಣವಲ್ಲೀ ಶ್ರೀಗಳಿಂದ ನಾಮಫಲಕ ಅನಾವರಣ

ಪ್ರಜಾವಾಣಿ ವಾರ್ತೆ



ಶಿರಸಿ ತಾಲ್ಲೂಕಿನ ಸೋಂದಾ ಮುಂಡಿಗೆಕೆರೆ ಪ್ರದೇಶದಲ್ಲಿ ಪಕ್ಷಿ ಸಂರಕ್ಷಣಾ ಮೀಸಲು ಪ್ರದೇಶ ನಾಮಫಲಕವನ್ನು ಸ್ವರ್ಣವಲ್ಲೀ ಗಂಗಾಧರೇಂದ್ರ ಸರಸ್ವತೀ ಸ್ವಾಮೀಜಿ ಅನಾವರಣ ಮಾಡಿದರು

ಶಿರಸಿ: ಪಾರಂಪರಿಕ ಜೀವ ವೈವಿಧ್ಯ ತಾಣವಾಗಿ ಗುರುತಿಸಿಕೊಂಡಿದ್ದ ತಾಲ್ಲೂಕಿನ ಸೋಂದಾದ ಮುಂಡಿಗೆಕೆರೆ ಪ್ರಸ್ತುತ ಪಕ್ಷಿ ಸಂರಕ್ಷಣಾ ಮೀಸಲು ಪ್ರದೇಶವಾಗಿ ಘೋಷಿಸಲ್ಪಟ್ಟಿದ್ದು, ಮಂಗಳವಾರ ಕೆರೆ ಆವರಣದಲ್ಲಿ ನಾಮಫಲಕ ಅನಾವರಣ ಮಾಡಲಾಯಿತು.

ನಾಮಫಲಕ ಅನಾವರಣ ಮಾಡಿದ ಸ್ವರ್ಣವಲ್ಲೀ ಗಂಗಾಧರೇಂದ್ರ ಸರಸ್ವತೀ ಸ್ವಾಮೀಜಿ ಮಾತನಾಡಿ, ಮುಂಡಿಗೆ ಕೆರೆ ಪಕ್ಷಿಗಳಿಗೆ ತವರು ಮನೆಯಿದ್ದಂತೆ. ಹಾಗಾಗಿ ಪಕ್ಷಿಗಳಿಗೆ ಆತಂಕಪಡಿಸದೆ ಅವುಗಳನ್ನು ಸಲಹುವ ಕಾರ್ಯ ಆಗಬೇಕು ಎಂದರು.

ಪ್ರಕೃತಿಗೆ ಮನುಷ್ಯನಿಂದಲೇ ಆತಂಕ ಆಗುತ್ತಿದೆ. ನಗರೀಕಣ, ಔದ್ಯೋಗೀಕರಣ, ಬೃಹತ್ ಯೋಜನೆಗಳ ಜಾರಿಯಂಥ ಆತಂಕ ಕಡಿಮೆ ಆಗಬೇಕಿದೆ. ಇರುವ ಪರಿಸರ ನಾಶ ಮಾಡದಿದ್ದರೆ ಅದೇ ಮಾನವ ಪ್ರಕೃತಿಗೆ ಮಾಡುವ ಉಪಕಾರವಾಗಿದೆ. ಪ್ರಕೃತಿಗೆ ಭಂಗ ಬರದ ರೀತಿ ಮಾನವರು ಜೀವನ ಕ್ರಮ ರೂಪಿಸಿಕೊಳ್ಳಬೇಕಿದೆ. ಈ ಪಕ್ಷಿಧಾಮ ಗುರಿತಿಸುವಿಕೆಯಲ್ಲಿ ಪಕ್ಷಿತಜ್ಞ ಪಿ.ಡಿ. ಸುದರ್ಶನ ಕೊಡುಗೆ ಸ್ಮರಣೀಯ ಎಂದು ಹೇಳಿದರು.

ಜೀವ ವೈವಿಧ್ಯ ಮಂಡಳಿ ಮಾಜಿ ಅಧ್ಯಕ್ಷ ಅನಂತ ಅಶೀಸರ ಮಾತನಾಡಿ, ದುರ್ಬಲವಾದ ಆವಾಸ ಸ್ಥಾನಗಳಿಗೆ ರಕ್ಷಣೆ ನೀಡುವುದು, ಸಮಗ್ರ ಜಲಾನಯನ ಅಭಿವೃದ್ಧಿ ಮತ್ತು ನಿರ್ವಹಿಸುವುದು, ಪರಿಸರ ಪ್ರವಾಸೋದ್ಯಮ ಯೋಜನೆ ರೂಪಿಸುವುದು ಸೇರಿದಂತೆ ಹಲವು ವಿಷಯಗಳನ್ನು ಒಳಗೊಂಡು ಮೀಸಲು ಪ್ರದೇಶ ಘೋಷಿಸಲಾಗಿದೆ ಎಂದರು.

ಸಿಸಿಎಫ್ ಕೆ.ವಿ.ವಸಂತ ರೆಡ್ಡಿ, ಡಿಎಫ್ಒ ಡಾ. ಜಿ.ಆರ್.ಅಜ್ಜಯ್ಯ ಮಾತನಾಡಿದರು. ವನ್ಯಜೀವಿ ತಜ್ಞ ಬಾಲಚಂದ್ರ ಸಾಯಿಮನೆ, ಪ್ರಮುಖರಾದ ಮಂಜುನಾಥ ಭಂಡಾರಿ, ನರಸಿಂಹ ಹೆಗಡೆ, ಗಜಾನನ ನಾಯ್ಕ ಇದ್ದರು. ಎಸಿಎಫ್ ರಘು ಡಿ. ಸ್ವಾಗತಿಸಿದರು. ರತ್ನಾಕರ ಬಾಡಲಕೊಪ್ಪ ನಿರೂಪಿಸಿದರು. ಆರ್.ಎಫ್.ಒ. ಉಷಾ ಕಬ್ಬೇರ್ ವಂದಿಸಿದರು.